ಶ್ರೀಮತಿ ಬಿ. ಎಲ್. ಸುಬ್ಬಮ್ಮ.—Public Service Commission ನವರು 1—2 ವರ್ಷಗಳು ಹಂಗಾಮಿಯಾಗಿ ಕೆಲಸಮಾಡಿದವರನ್ನು ಕೆಲಸದಿಂದ ತೆಗೆದುಹಾಕಿದ ಪಕ್ಷದಲ್ಲಿ ಅಂಥವರಿಗೆ ತೊಂದರೆಗಳಾಗುತ್ತವೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಡವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಯೋಚನೆ ಮಾಡುತ್ತೇವೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ವಿಶ್ವವಿದ್ಯಾನಿಲಯದಲ್ಲಿ ಜಾತಿ, ಕೋಮುವಾರುಗಳಿಗೆ ಹೆಚ್ಚು ಪ್ರಾಶಸ್ತ್ಯಕೊಡುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್ — ಬಂದಿಲ್ಲ. ಆ ವಿಷಯವನ್ನು ವಿಚಾರಮಾಡುತ್ತೇನೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—Service ನ್ನು ಗಮನಿಸದೆ ಅವರವರ ಜಾತಿಗೇ ಸಹಾಯ ಮಾಡುತ್ತಾರೆ ಎಂಬ ದೂರುಗಳು ಸರ್ಕಾರಕ್ಕೆ ಬಂದಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸರ್ಕಾರದ ಗಮನಕ್ಕೆ ಇನ್ನೂ ಬಂದಿಲ್ಲ. ಬಂದರೆ ಸರಿಪಡಿಸುತ್ತೇವೆ.

Tanks in Krishnarajapet Taluk

Q.—359. **Sri S. M. LINGAPPA** (Krishnarajpet).—

Will the Government be pleased to state :—

(*a*) the number of estimates prepared for the repairs of tanks and for construction of tanks in Krishnarajapet Taluk from the year 1952 to June 1955;

(*b*) the number of works sanctioned and the number of works completed ?

A.—**Sri Kadidal MANJAPPA** (Minister for Revenue and Public Works).—

(*a*) Estimates prepared for repairs including restorations.	Estimates prepared for new tanks.
144	Nil.
(*b*) Repairs and restoration works sanctioned.	Repair works completed.
110	56

Sri S. M. LINGAPPA.—I have no supplementaries.

Tanks in Nelamangala Taluk (Repairs and restoration).

Q.—414. **K. V. BYRE GOWDA** (Bangalore North).—

Will the Government be pleased to state :—

(*a*) the number of major tanks in Bangalore North taluk;

(*b*) the names of tanks that are included for restoration for the year 1955-56;

(*c*) what arrangements are made to avoid the formation of silts in the tanks;

(*d*) whether the water in the tanks is sufficient to irrigate the entire *atchkat* in view of the formation of this silt ?

A.—**Sri Kadidal MANJAPPA** (Minister for Revenue and Public Works).—

(*a*) 40

(*b*) Hundanaballi tank and Gangundanahalli tank.

(*c*) The methods generally adopted to prevent silting up in tanks are the following :—

(1) Planting trees all round the water spread area of the tanks above full tank level;

(2) Constructing a series of silt traps across feeder hallas.

(*d*) The formation of silt will reduce to some extent the capacity of the tank. To what extent this results in insufficient supply to the atchkat has to be ascertained by systematic surveys and investigation.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೇವನಹಳ್ಳಿ ತಾಲ್ಲೂಕು ಕೆರೆಗಳಲ್ಲಿ ಹೂಳುಮುಚ್ಚಿಕೊಳ್ಳುವುದನ್ನು ತಪ್ಪಿಸುವುದಕ್ಕಾಗಿ ಮರಗಳನ್ನು ಹೂಣಿರುವುದಕ್ಕೆ ವಿವರಗಳು ಇವೆಯೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ನನ್ನ ಹತ್ತಿರ ಅದರ ವಿವರಗಳಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಕೆರೆಗಳಿಗೆ ಹೆಚ್ಚಿಗೆ silt ಬಂದು ವ್ಯವಸಾಯಕ್ಕೆ ಸಾಕಾದಷ್ಟು ನೀರಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಕೆ. ವಿ. ಬೈರೇಗೌಡ.—ಕೆರೆಗಳಲ್ಲಿ ಹೂಳು ತುಂಬಿಕೊಂಡು ರೈತರಿಗೆ ಬಹಳವಾಗಿ ನಷ್ಟವಾಗಿರುವುದರಿಂದ, ರೈತರಿಗೆ remission ಕೊಡಬೇಕಾದುದು ಸರ್ಕಾರದ ಕರ್ತವ್ಯವಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಸಾಧ್ಯವಾದಷ್ಟು remission ನನ್ನು ಸರ್ಕಾರದವರು ಕೊಡುತ್ತಾರೆ.